ನೀರನ್ನು ಎಸ್‌ಕೇಪ್ ಚಾನಲ್‌ನಿಂದ ವ್ಯಾಲಗೆ ಬಿಡುವಂತೆ ಮಾಡಿದ್ದೇವೆ. ಈಗ ಬೇಕಾದಷ್ಟು ನೀರು ವ್ಯಾಲಗೆ ಹರಿದು ಹೋಗುತ್ತದೆ. ಅಲ್ಲಿ ನೀರನ್ನು ಉಪಯೋಗ ಮಾಡುವುದಿಲ್ಲ ಎನ್ನುವ ಪರಿಸ್ಥಿತಿ ಇಲ್ಲ.

ಶ್ರೀ ಕೆ. ಪಿ. ನಾಡಗೌಡ.—ಈ ಹಡಕರ್ ಡ್ಯಾಮ್ ಕಂಪ್ಲೀಟ್ ಆದನಂತರ 8 ತಿಂಗಳುವರೆಗೂ ನೀರು ಕೊಡುವ ಪ್ರೊಪೊಜನ್ ಇದೆಯೆಂದು ತಿಳಿದಿದ್ದೇನೆ. ಬೇಸಿಗೆಯಲ್ಲಿ ನಾಲ್ಕು ತಿಂಗಳು ಹಡಕಲ್ ಡ್ಯಾಮಿನಿಂದ ನೀರು ಕೊಡುವುದಕ್ಕಾಗುವುದಿಲ್ಲ. ಆ ನಾಲ್ಕು ತಿಂಗಳು ಅವಶ್ಯವಾಗಿ ನೀರು ಬೇಕಾಗಿರುವಂತಹ ಕಾಲ ಆದ್ದರಿಂದ ರೈಟ್ ಬ್ಯಾಂಕ್ ಕೆನಾಲ್ ಏರಿಯಾದಲ್ಲಿ ಯಡ್ರಾಹಳ್ಳ, ಲೋಕಾಪುರ ಹಳ್ಳ ಮತ್ತು ಹಿರೇಹಳ್ಳ ಎಂಬ ಮೂರು ಹಳ್ಳಗಳಿಗೆ ಪಾಡಿಯಂ ಇರಿಗೇಷನ್ ರಿಸರ್ವಾಯರ್ ಕಟ್ಟಲಿಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆಯೇ ?

Sri VEERENDRA PATIL.—It is a suggestion for action.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮುಖ್ಯ ನದಿಗೆ ರಿಸರ್ವಾಯರ್ ಕಟ್ಟಿದ ಮೇಲೆ ಮುಂದೆ ಯಾವ್ಯಾವ ಸಣ್ಣ ಸಣ್ಣ ಬಾಂಡಾರ ಕಟ್ಟುವುದಕ್ಕೆ ಸಾಧ್ಯವೆಂಬುದನ್ನು ಯೋಜನೆ ಮಾಡಬಹುದು. ಈಗ ಅಲ್ಲ ಮೈನ್ ಸ್ಕೀಮ್ ಕಟ್ಟುವುದಕ್ಕೆ ಯೋಜನೆ ಸಿದ್ಧವಾಗಿದೆಯೇ ? ಹಾಗಿದ್ದರೆ, ಅದರಂತೆ ಮಾಡಬೇಕಾದರೆ ಎಷ್ಟು ಹಣ ಬೇಕಾಗುತ್ತದೆ ? ಮುಂದೆ ಮಾಡಬಹುದು ಎಂದು ನಿರೀಕ್ಷಣೆಯ ಮೇಲೆ ಅಂದಾಜು ತಯಾರು ಮಾಡಲಾಗಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಇಲ್ಲಿಯವರೆಗೆ ಒಂದು ಅಂದಾಜು ತಯಾರಾಗಿದೆ. ಅದು ಸುಮಾರು ಎರಡು ಲಕ್ಷ ರೂಪಾಯಿಯಾದ್ದು. ಉಳಿದ ಎಲ್ಲಾ ಕಡೆ ಪೆರೇನಿಯಲ್ ನೀರು ಹರಿಯುತ್ತದೆಂದು ಹೇಳುವುದಕ್ಕೆ ಕಷ್ಟ. ಕಮ್ಯಾಂಡ್ ಏರಿಯಾ ಡೆವಲಪ್ ಆದಮೇಲೆ ಸೀಪೇಜ್ ವಾಟರ್ ಎಷ್ಟು ದೊರಕಬಹುದೆಂದು ನೋಡಬೇಕಾಗಿದೆ.

FEEDER CHANNEL TO HALALU KAMBINAKOTE TANKS FROM NELLIGERE DAM.

34. Sri N. HUTCHMASTY GOWDA (Huliyurdurga).—

Will the Minister of State for Mionr Irrigation be pleased to state :—

(*a*) the date on which the work relating to the Feeder channel, estiuated to provide water to Halalu Kambinakote tanks, etc., from Nelligere dam in Nagamangala taluk was started ;

(*b*) the estimated amount of the same ;

(*c*) the date on which the estimate was sanctioned ;

(*d*) the amount spent up to the end of September 1969 ;

(*e*) the reason for the non-completion of the remaining work ;

(*f*) the programme chalked out for finalising the said work ?

Smt. BASAVARAJESWARI (Deputy Minister for Social Welfare) [on behalf of Sri A. J. Doddameti (Minister of State for Minor Irrigation].

(*a*) June 1964.

(*b*) Rs. 3,00,000.

(SMT. BASAVARAJESWARI)

(*c*) June 1964.

(*d*) Rs. 4,81,243.

(*e*) Earthwork could not be executed as there is water in Biligundakere.

(*f*) The execution of the remaining work will be undertaken after the decrease of water in the above tank.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮೊದಲು ಮೂರು ಲಕ್ಷ ರೂಪಾಯಿ ಅಂದಾಜು ಆದುದು. ಆದರೆ ಈಗಾಗಲೇ 4 ಲಕ್ಷ 81 ಸಾವಿರದ 243 ರೂಪಾಯಿಗಳು ಖರ್ಚಾಗಿವೆ. ಇನ್ನೂ ಆಗ ಬೇಕಾಗಿದ್ದ ಕೆಲಸ ಬಾಕಿ ಇದೆ. ಅದಕ್ಕೋಸ್ಕರ ಏನಾದರೂ ತಿದ್ದುಪಡಿ ಅಂದಾಜು ಆಗಿದೆಯೇ ಹಾಗಿದ್ದರೆ, ಅದರ ಮೊಬಲಗು ಎಷ್ಟು ?

† ಶ್ರೀಮತಿ ಬಸವರಾಜೇಶ್ವರಿ.—ಸುಮಾರು 5 ಲಕ್ಷ ರೂಪಾಯಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಅಂದಾಜಿನ ಪ್ರಕಾರ ಎಷ್ಟು ಎಕರೆ ಗದ್ದೆಗೆ ಖಾಯಂ ಆಗಿ ನೀರು ಒದಗಿಸತಕ್ಕ ಯೋಜನೆ ಇದೆ ?

ಶ್ರೀಮತಿ ಬಸವರಾಜೇಶ್ವರಿ.—ಒಟ್ಟು 395 ಎಕರೆ. ಎಗ್ರಿಸ್ಟಿಂಗ್ 265 ಎಕರೆ, ಫ್ರೆಷ್ ಆಗಿ 130 ಎಕರೆ ನೀರಾವರಿಯಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇಲ್ಲಿ ಉತ್ತರದಲ್ಲಿ ಬಿಳಿಗುಂಡ ಕೆರೆಯಲ್ಲಿ ನೀರು ಇರುವುದರಿಂದ ಮಣ್ಣಿನ ಕೆಲಸ ಮಾಡಲಾಗಲಿಲ್ಲ ಎಂದು ಹೇಳಿದ್ದಾರೆ. ಆ ಕೆರೆಯಲ್ಲಿ ಮೂರು ತಿಂಗಳು ಸಹ ನೀರು ಇಲ್ಲ. ಆ ಕೆರೆಯಿಂದ ಅಡ್ಡಿಯಾಗುತ್ತದೆಂದು ಹೇಳುವುದು ಆದು ಇಂಜಿನಿಯರುಗಳು ಹೇಳುವ ತಪ್ಪು ಉತ್ತರವಾಗಿದೆ. ಇದನ್ನು ಕೂಡಲೇ ಪರಿಶೀಲನೆ ಮಾಡಿ ನಿಜವಾದ ಪರಿಸ್ಥಿತಿ ಏನೆಂಬುದನ್ನು ತಿಳಿಸುತ್ತೀರಾ ?

ಶ್ರೀಮತಿ ಬಸವರಾಜೇಶ್ವರಿ.—ನೀರು ಇದೆ, ಕೆಲಸ ಪ್ರಾರಂಭ ಮಾಡಲಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಇದನ್ನು ಅದಷ್ಟು ಜಾಗ್ರತೆ ಮಾಡಿ 1970ನೇ ಮಾರ್ಚಿಗೆ ಕೆಲಸ ಮುಗಿಸುತ್ತೇವೆ.

APPOINTMENT OF MEMBER OF L.A. ON EMPLOYMENT EXCHANGE COMMITTEE AT BELGAUM.

52. Sri B. B. SAYANAK (Belgaum).—

Will the Minister for Law, Labour and Parliamentary Affairs be pleased to state :—

(*a*) the number of people knowing Marathi recommended for Employment through the Employment Exchange, Belgaum from 1st January 1969 to 30th October 1969 ;

(*b*) the total number of persons recommended for Employment through Employment Exchange, Belgaum from 1st January 1969 to 30th October 1969 ;

(*c*) the reasons for not giving a chance to the Local M.L.A. on the Employment Exchange Committee at Belgaum ?